ELECTION URGENT

सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಸಂಖ್ಯೆ : ರಾಚುಆ 41 ಇಯುಬಿ 2021

ಕರ್ನಾಟಕ ರಾಜ್ಯ ಸಹಕಾರ ಮಾರಾಟ
ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ
ನಂ.8, ಕನ್ನಿಂಗ್ ಹ್ಯಾಂ ರಸ್ತೆ
ಬೆಂಗಳೂರು-52, ದಿನಾಂಕ:26-4-2021

## ಪತ್ರಿಕಾ ಪ್ರಕಟಣೆ

ವಿಷಯ : ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ – 2021 – ಚುನಾವಣೆಯನ್ನು ನಡೆಸುತ್ತಿರುವ ಬಗ್ಗೆ.

-:-:-:-

- ಅವಧಿ ಮುಕ್ತಾಯವಾಗಿದ್ದ, ಆದರೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ವಿಂಗಡಣೆ ಮತ್ತು ಮೀಸಲಾತಿಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದ 8 ಜಿಲ್ಲೆಗಳ 10 ನಗರ ಸ್ಥಳೀಯ ಸಂಸ್ಥೆಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಂತೆ ಸಾರ್ವತ್ರಿಕ ಚುನಾವಣೆಯನ್ನು ಹಾಗೂ ವಿವಿಧ ಕಾರಣಗಳಿಂದ ತೆರವಾಗಿದ್ದ 2 ವಾರ್ಡುಗಳಿಗೆ ಉಪ ಚುನಾವಣೆಯನ್ನು ನಡೆಸಲು ಆಯೋಗವು ಈಗಾಗಲೇ ಹೊರಡಿಸಿರುವ ವೇಳಾಪಟ್ಟಿಯಂತೆ **ದಿನಾಂಕ:27-4-2021ರಂದು ಮತದಾನವು ನಡೆಯಲಿದ್ದು ಸದರಿ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.** ಚುನಾವಣೆ ನಡೆಯುತ್ತಿರುವ ಸದರಿ ನಗರ ಸ್ಥಳೀಯ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

### ಸಾರ್ವತ್ರಿಕ ಚುನಾವಣೆ

| ಕ್ರ.ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ ಹೆಸರು | ಒಟ್ಟು ವಾರ್ಡ್‌ಗಳ ಸಂಖ್ಯೆ |
|---|---|---|---|
| 1 | ಬಳ್ಳಾರಿ | ಬಳ್ಳಾರಿ ಮಹಾನಗರ ಪಾಲಿಕೆ | 39 |
| 2 | ಬೆಂಗಳೂರು ಗ್ರಾಮಾಂತರ | ವಿಜಯಪುರ ಪುರಸಭೆ | 23 |
| 3 | ರಾಮನಗರ | ರಾಮನಗರ ನಗರಸಭೆ | 31 |
| | | ಚನ್ನಪಟ್ಟಣ ನಗರಸಭೆ | 31 |
| 4 | ಚಿಕ್ಕಬಳ್ಳಾಪುರ | ಗುಡಿಬಂಡೆ ಪಟ್ಟಣ ಪಂಚಾಯತಿ | 11 |
| 5 | ಶಿವಮೊಗ್ಗ | ಭದ್ರಾವತಿ ನಗರಸಭೆ | 35 |
| | | ತೀರ್ಥಹಳ್ಳಿ ಪಟ್ಟಣ ಪಂಚಾಯತಿ | 15 |
| 6 | ಹಾಸನ | ಬೇಲೂರು ಪುರಸಭೆ | 23 |
| 7 | ಕೊಡಗು | ಮಡಿಕೇರಿ ನಗರಸಭೆ | 23 |
| 8 | ಬೀದರ್ | ಬೀದರ್ ನಗರಸಭೆ | 35 |

**ಉಪ ಚುನಾವಣೆ**

| ಕ್ರ.ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ ಹೆಸರು | ವಾರ್ಡ್ ನಂ. |
|---|---|---|---|
| 1 | ಹಾವೇರಿ | ಹಿರೇಕೆರೂರ ಪಟ್ಟಣ ಪಂಚಾಯತಿ | 1 |
| 2 | ಬೀದರ್ | ಹಳ್ಳಿಖೇಡ ಪಟ್ಟಣ ಪಂಚಾಯತಿ | 11 |

- ಸದರಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವ ಸಂಬಂಧ ಕೋವಿಡ್ ಹಿನ್ನಲೆಯಲ್ಲಿ ಕೇಂದ್ರ ಗೃಹ ಮಂತ್ರಾಲಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಯನ್ವಯ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಚುನಾವಣೆ ನಡೆಸಲು ಆಯೋಗವು ಪ್ರತಿ ಮತಗಟ್ಟೆ ಕೇಂದ್ರಗಳಿಗೂ ಕೋವಿಡ್ ನಿಂದ ರಕ್ಷಣೆಗಾಗಿ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಒದಗಿಸಿರುತ್ತದೆ.
- ಕೋವಿಡ್ ನಿಯಂತ್ರಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಸಂಬಂಧಪಟ್ಟ ಎಲ್ಲಾ ಚುನಾವಣಾಧಿಕಾರಿಗಳಿಗೂ, ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳಿಗೂ, ಪೊಲೀಸ್, ಆರೋಗ್ಯ ಹಾಗೂ ಇತರೆ ಸಿಬ್ಬಂದಿಗಳಿಗೂ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.
- ಭಾರತ ಸಂವಿಧಾನದ ಅನುಚ್ಛೇದ 243 ಕೆ ಹಾಗೂ 243 ಜೆಡ್ಎ ರನ್ವಯ ಆಯೋಗಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತದಾನದ ಅವಧಿಯನ್ನು ಒಂದು ಗಂಟೆಯ ಕಾಲ ವಿಸ್ತರಿಸಿ (ಅಂದರೆ ಬೆಳಗ್ಗೆ 7–00 ಗಂಟೆಯಿಂದ ಸಂಜೆ 6–00 ಗಂಟೆಯವರೆಗೆ) ಅವಕಾಶ ನೀಡಲಾಗಿದೆ.
- ಸದರಿ ಅವಧಿಯಲ್ಲಿ ಮತದಾನ ಮುಕ್ತಾಯಕ್ಕೆ ಒಂದು ಗಂಟೆ ಮುಂಚಿತವಾಗಿ ಕೋವಿಡ್ ಸೋಂಕಿತರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಮತ ಚಲಾಯಿಸಲು ಅವಕಾಶ ನೀಡಲಾಗಿದೆ.

ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ
26/04/2021

**ರವರಿಗೆ:**

1) ಜಿಲ್ಲಾಧಿಕಾರಿಗಳು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಹಾಸನ, ಕೊಡಗು, ಬೀದರ್ ಮತ್ತು ಹಾವೇರಿ ಜಿಲ್ಲೆ.
2) ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು.
3) ಎಲ್ಲಾ ಪತ್ರಿಕಾ ಮಾಧ್ಯಮ ಮತ್ತು ಸುದ್ದಿ ಮಾಧ್ಯಮಗಳಿಗೆ.